ಮುಂದೆ ಓಡಾಡಿಸುತ್ತ, ಅಕ್ಕಪಕ್ಕದ ಮನೆಯ ಹಿರಿಯರಿಂದ ಹೇಳಿಸುತ್ತ ಹಲವಾರು ಬಗೆಯಲ್ಲಿ ಪುಸಲಾವಣೆ ನಡೆಸಿದ್ದಳು.

ಮೊದಲೇ ಹಗುರಾಗಿದ್ದ ಸೂರಿಯ ಮನಸ್ಸು ಜೋಡಿ ಗಿಣಿಗಳನ್ನು ನೋಡಿದಾಗಿನಿಂದ ಇನ್ನೂ ಉಲ್ಲಾಸಗೊಂಡಿತ್ತು. ಮದುವೆಯ ಮಾತು ಹಾಗಿರಲಿ, ಈ ಜೋಡಿ ಗಿಣಿಗಳ ಸಂಕೇತವೇನು?' ಎಂದು ಮತ್ತೆ ಮತ್ತೆ ಕೇಳತೊಡಗಿತ್ತು. ಆ ಗುಂಗಿನಲ್ಲಿ ಸ್ನಾನ ಮುಗಿಸಿ ಬಂದವನೇ ರೈಲಿಗೆ ಹೋಗಲು ಸಿದ್ಧ ಮಾಡಿಕೊಂಡ. ಇದ್ದ ಒಂದೇ ಸಿಲ್ಕ್ ಶರ್ಟ್, ವುಲನ್ ಪ್ಯಾಂಟ್ ಹಾಕಿ ಬಹಳ ದಿನಗಳಾಗಿದ್ದವು. ಇವತ್ತು ಅದೇ ಆಗಲಿ ಅಂದುಕೊಂಡ. ಪ್ಯಾಂಟ್ ಕೊಂಚ ಚಿಕ್ಕದಾಗಿ ಮೇಲಕ್ಕೇರಿತ್ತು, ಶರ್ಟ್ ಕಂಕುಳ ಹತ್ತಿರ ಹಿಡಿಯುತ್ತಿತ್ತು. ಜೊತೆಗೆ ಇಟ್ಟು ಇಟ್ಟು ಅಲ್ಲಿಲ್ಲಿ ಕಂದುಮಚ್ಚೆಗಳಾಗಿದ್ದವು. ಸೂರಿಗೆ ಅದಾವುದೂ ಗಮನಕ್ಕೆ ಬರಲಿಲ್ಲ. ಶರ್ಟಿನ ಗುಂಡಿಗಳೆಲ್ಲಿ? ಚಿನ್ನದ ಗಿಲೀಟು ಹಚ್ಚಿದ ಬೆಳ್ಳಿಯ ಗುಂಡಿಗಳು, ಡಬ್ಬಲ್ ಕಾಜಾಕ್ಕೆ ಹಾಕುವಂತಹವು. ಕಪಾಟಿನ ಖಾನೆಗಳನ್ನೆಲ್ಲ ಕಿತ್ತಾಡಿದ. 'ಅಮ್ಮ, ನನ್ನ ಸಿಲ್ಕ್ ಶರ್ಟಿನ ಗುಂಡಿಗಳೆಲ್ಲಿ?' ಎಂದು ಕಿರುಚಿದ. 'ಅದೇನು, ಇವತ್ತು ಸಿಲ್ಕ್ ಶರ್ಟೂ?' ಎಂದು ನಸು ನಗುತ್ತ 'ಅಲ್ಲೇ ಎಲ್ಲೋ ಇರಬೇಕು, ನೋಡೋ' ಎಂದು ಅವಳು ಅಡಿಗೆ ಮನೆಯಿಂದಲೇ ಕೂಗಿ ಹೇಳಿದಳು. ಕಪಾಟಿನಲ್ಲಿಲ್ಲದ ಮೇಲೆ ಅದು ಅಮ್ಮನ ಟ್ರಂಕಿನಲ್ಲೇ ಇರಬೇಕು. ತೆಗೆಯಲು ಹೋದರೆ ಬೀಗ ಬಡಿದಿತ್ತು. ಅಪ್ಪ ಸತ್ತ ಮೇಲೆ ತಾನಂತೂ ಅದನ್ನು ತೆಗೆದೇ ಇಲ್ಲ. ತುಕ್ಕು ಹಿಡಿದ ಬೀಗ. ಬೀಗದ ಕೈ ಎಲ್ಲಿದೆಯೋ ಏನೋ? ಹೊತ್ತು ಬೇರೆ ಆಗಿತ್ತು. ಸೂರಿ ಸಿಟ್ಟಿನಿಂದ ಝಗ್ಗನೆ ಬೀಗ ಎಳೆದ. ಕಿತ್ತು ಬಂತು. ಮುಚ್ಚಳ ತೆಗೆದು ಹುಡುಕತೊಡಗಿದ. ಹುಡುಕುತ್ತ ಹೋದಂತೆ ಅವನ ಮುಂದೆ ಒಂದು ವಿಚಿತ್ರ ಲೋಕವೇ ತೆರೆದುಕೊಂಡಿತು. ಅಪ್ಪನ ಬೆವರಿನ ವಾಸನೆಯನ್ನೂ ಅಂಟಿಕೊಂಡಿದ್ದ ಊದಾ, ಆನಂದ, ನೇರಿಳೆ ಬಣ್ಣಗಳ ಅಮ್ಮನ ಜರೀಅಂಚಿನ ರೇಷ್ಮೆ ಸೀರೆಗಳು. ಅವಳ ಮುತ್ತೈದೆ ಕಾಲದವು. ಮೋಡಿ ಅಕ್ಷರದಲ್ಲಿ ಬರೆದ ಯಾವ ಯಾವುದೋ ಕಾಗದ ಪತ್ರಗಳು, ಜಾತಕಗಳು, ಕಂದು ಬಣ್ಣಕ್ಕೆ ತಿರುಗಿ ಪುಡಿಪುಡಿಯಾಗುತ್ತಿದ್ದ ಅಮ್ಮನ ಬಳಗದವರ ಫೋಟೊಗಳು, ವಿಕ್ಟೋರಿಯಾ ಕಾಲದ ನಾಣ್ಯಗಳು, ಒಂದೊಂದರಲ್ಲೂ ಕರ್ಪೂರದ ವಾಸನೆ ಬೆರೆತ ನುಸಿಗುಳಿಗೆಯ ಘಾಟು. ತೀರಾ ತಳದ ಮೂಲೆಯಲ್ಲಿ ಹರಿದ ರವಿಕೆಯಲ್ಲಿ ಕಟ್ಟಿಟ್ಟಿದ್ದ ಒಂದು ಸಣ್ಣಗಂಟು ಅವಿತು ಕುಳಿತಿತ್ತು. ಬಿಚ್ಚಿನೋಡಿದ. ಅಲ್ಲಿ ತರಹಾವಾರಿ ಅರಿಸಿನ ಕುಂಕುಮದ ಬೆಳ್ಳಿಯ ಬಟ್ಟಲುಗಳು, ಪನ್ನೀರು ದಾನಿ, ಅಡ್ಡಿಗೆ, ಜಡೆಬಿಲ್ಲೆ ಮುಂತಾದ ಅಮ್ಮನ ಹಸಿರುಗಟ್ಟಿದ ಒಡವೆಗಳು. ಯಾವವೂ ಚಿನ್ನದ್ದೆಂದು ತೋರಲಿಲ್ಲ. ಅಷ್ಟು ಚಿನ್ನ ನಮ್ಮಲ್ಲಿರುವುದಾದರೂ ಹೇಗೆ? ಅವುಗಳ ನಡುವೆ ಒಂದೆರಡು ಹರಳಿನ ಉಂಗುರಗಳೂ ಇದ್ದವು. ಒಂದಂತೂ ಫಳ ಫಳ ಹೊಳೆಯುತ್ತಿತ್ತು. ಬೆರಳಿಗೆ ಹಾಕಿ ನೋಡಿದರೆ ಅವನಿಗೆ ಮಾಡಿಸಿದಂತಿತ್ತು. ಎಲ್ಲೋ ಮೂಲೆಯಲ್ಲಿ ಶರ್ಟಿನ ಗಿಲೀಟು ಗುಂಡಿಯೂ ಮಿಕ ಮಿಕ ನೋಡುತ್ತ ಕುಳಿತಿತ್ತು.

ಗುಂಡಿಯನ್ನು ಕಾಜಾಕ್ಕೆ ತೂರಿಸುವ ಹೊತ್ತಿಗೆ ಅಪ್ಪನ ಕಾಲದ ಗೋಡೆ ಗಡಿಯಾರ ಠಣ್ ಎಂದು ಗಂಟೆ ಬಾರಿಸಿತು. ಆಗಲೇ ಹನ್ನೊಂದೂವರೆ, ಇವತ್ತು ಯಾಕೆ ಇಷ್ಟು ಹೊತ್ತಾಯ್ತು?– ಎಂದವನೇ ಸಾಮಾನೆಲ್ಲವನ್ನೂ ಟ್ರಂಕಿಗೆ ಯದ್ವಾ ತದ್ವಾ ತುರುಕಿ ಡ್ಯೂಟಿಗೆ ಹೊರಡಲು ಸಿದ್ಧನಾಗಿ ಕೆಳಗಿಳಿದು ಬಂದ. ಅಮ್ಮ ಮಡಿಗೆ ಹೋಗಿದ್ದವಳು ಇವನ ಅಂಗಿ ಚಡ್ಡಿಗಳನ್ನು ಕುಕ್ಕುತ್ತ ಕೂತಿದ್ದಳು. 'ಹೊತ್ತಾಗಿರುವ ದಿನದಲ್ಲೇ ಹೀಗೆ' ಎಂದು ಗೊಣಗುತ್ತ 'ಅಮ್ಮಾ, ನನಗೆ ಹೊತ್ತಾಯ್ತು, ನಾನು ಹೊರಟೆ' ಎಂದು ಕೂಗಿದ. 'ಆಯಿತು. ಎರಡು ನಿಮಿಷ, ಬರ್ತೀನಿ. ಕಾಫಿ ಕುಡಿದು ಹೋಗೋವಂತೆ' ಎಂದ ಅವಳು ಬಚ್ಚಲ ಮನೆಯಿಂದಲೇ ಉತ್ತರ ಕೊಟ್ಟಳು. 'ನಿನ್ನ ಎರಡು ನಿಮಿಷ ನಾನು ಕಾಣೇನೇ. ನಾನು ಅಲ್ಲೇ ಕುಡಿಕೋತೀನಿ' ಅಂದ ಸೂರಿ. 'ಸರಿ, ಬಾಗಿಲು ಮುಂದೆಳೆದುಕೊಂಡು ಹೋಗು. ನಾನು ಈಗ ಬಂದೆ' ಎಂದು ಮಾರುತ್ತರ ಕೊಟ್ಟಳು ತಾಯಿ. ಸೂರಿ ದಡದಡನೆ ಸ್ಟೇಷನ್ನಿನ ದಾರಿ ಹಿಡಿದ.